ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ಸಂಖ್ಯೆ : ವಾಇ : ಉ ನಿ : ಸುಮಪ : 2015–16 : ಸೆಪ್ಟೆಂಬರ್ 24, 2015

## ಬಕ್ರೀದ್ : ರಾಜ್ಯದ ಜನತೆಗೆ ಮುಖ್ಯಮಂತ್ರಿ ಶುಭಾಶಯ




**ಬೆಂಗಳೂರು, ಸೆಪ್ಟೆಂಬರ್ 24:**

*ಬಕ್ರೀದ್* ಎಂದೇ ಜನಪ್ರಿಯವಾಗಿರುವ *ಈದ್–ಅಲ್–ಆಜಾ* ಹಬ್ಬದ ಸುಸಂದರ್ಭದಲ್ಲಿ ಮುಖ್ಯಮತ್ರಿ ಶ್ರೀ ಸಿದ್ದರಾಮಯ್ಯ ಅವರು ರಾಜ್ಯದ ಜನತೆಗೆ, ವಿಶೇಷವಾಗಿ ಮುಸಲ್ಮಾನ ಬಾಂಧವರಿಗೆ, ಶುಭ ಹಾರೈಸಿದ್ದಾರೆ.

*ಎಲ್ಲವೂ ತನಗೇ ಬೇಕು* ಎಂಬ ಮಾನವ ಸಹಜ ದೌರ್ಬಲ್ಯ ಹಾಗೂ ಸ್ವಾರ್ಥವನ್ನು ದೂರ ಮಾಡಲು ಪ್ರೇರಣೆ ನೀಡುವ ಬಕ್ರೀದ್ ಹಬ್ಬವು ಇಸ್ಲಾಂ ಧರ್ಮದ ವಿಶೇಷ ಆಚರಣೆಗಳಲ್ಲೊಂದಾಗಿದೆ. ವರ್ಷಕ್ಕೆ ಕನಿಷ್ಠ ಒಮ್ಮೆಯಾದರೂ ತಾವು ಸೇವಿಸುವ ಅದ್ದೂರಿ ಭೋಜನದ ಒಂದು ಪಾಲನ್ನು ತಮ್ಮ ಕುಟುಂಬದವರೊಡನೆ, ಮತ್ತೊಂದು ಪಾಲನ್ನು ತಮ್ಮ ಬಂಧು ಮಿತ್ರರೊಡನೆ ಹಾಗೂ ಮಗದೊಂದು ಪಾಲನ್ನು ಬಡವರು ಮತ್ತು ಕಡು ಬಡವರೊಡನೆ ಹಂಚಿ ತಿನ್ನಲು ಬಕ್ರೀದ್ ಅವಕಾಶ ಕಲ್ಪಿಸುತ್ತದೆ. ಮಕ್ಕಳು ಸದಾ ಕಾಲ ತಮ್ಮ ತಂದೆ–ತಾಯಿಗೆ ವಿಧೇಯರಾಗಿ ಗೌರವದಿಂದ ಕಾಣಬೇಕೆಂಬುದನ್ನು ಈ ಹಬ್ಬವು

ಎಲ್ಲರಿಗೂ ಮನವರಿಕೆ ಮಾಡಿಕೊಡುತ್ತದೆ. ಅಷ್ಟೇ ಅಲ್ಲ ! ತ್ಯಾಗ ಮತ್ತು ಬಲಿದಾನದ ಸಂಕೇತವಾಗಿರುವ ಬಕ್ರೀದ್ ಹಬ್ಬವು ಭಾವೈಕ್ಯತೆಯ ಬೆಸೆಯಲು ಸರ್ವರಲ್ಲೂ ಸ್ಫೂರ್ತಿಯನ್ನು ಚಿಮ್ಮಿಸುತ್ತದೆ ಎಂದು ಶ್ರೀ ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.

*************

ಡಿ ಪಿ ಎಂ